ತಾರತಮ್ಯದಲ್ಲಿ ಆಕೆಯನ್ನು ಮೇಲೇರಿಸಿರುವುದಾಗಿ ಪ್ರಚಾರ ಮಾಡಿದೆ. ಯಾವುದೂ ಯಶಸ್ವಿಯಾಗಲಿಲ್ಲ. ತನ್ನೊಳಗೆ ಅಪಾರವಾಗಿ ಅಡಕವಾಗಿದ್ದ ಪ್ರತಿಭೆಗಳನ್ನು ನನ್ನಮ್ಮನ ಅಕರಾಸ್ಥೆಯೊಂದಿಗೆ ಘೋಷಿಸುತ್ತಿದ್ದಳು. ತನ್ನ ಸರಳ ನಡವಳಿಕೆ ಮತ್ತು ಸಂಪನ್ನ ಮನೋಧರ್ಮದಿಂದ ಸುತ್ತಲೂ ಒಂದು ಆಪ್ತ ವಲಯ ನಿರ್ಮಿಸಿಕೊಂಡಳು. ಮೇಲ್ನೋಟಕ್ಕೆ ತೀರ ನಿರ್ಮೋಹಿಯಾಗಿ ಕಾಣ್ತಾಯಿದ್ದಾಕೆ ತನ್ನ ಮೋಹದ ಬಲೆಯಲ್ಲಿ ಬಹಳಷ್ಟು ಮಂದಿಯನ್ನು ಹಿಡಿದಿದ್ದಳು. ಒಂದು ಅವ್ಯಕ್ತ ಅನಿರ್ವಚನೀಯ ಮೋಡಿಯಲ್ಲಿ ಮಕ್ಕಳಲ್ಲದೆ ಅಧ್ಯಾಪಕರೂ ಆಕೆಯ ಸ್ವಕೀಯ ಪರಿಧಿಯೊಳಗೆ ಸೇರಿಹೋದರು. "ಬ್ರಾಹ್ಮಣರ ಹುಡುಗಿ ಶ್ಯಾಮಾ, ಎದುರು ಹಾಕಿಕೊಳ್ಳಬೇಡ" ಎಂದು ಅಮ್ಮ ಎಚ್ಚರಿಸಿದಳು. ಆ ಕಾಲವೇ ಹಾಗಂದಿತ್ತು. "ನನಗೆ ಬೇಕಾದಂತೆ ಇರ್ತೇನೆ" ಎಂದು ಅಮ್ಮನಿಗೆ ದಬಾಯಿಸಿದರೂ ಬಹಳ ಬೇಗನೆ ಆ ಪ್ರಭಾವಲಯದೊಳಗೆ ನಾನೇ ಸೆಳೆದುಹೋದುದು ಅರಿವಿಗೇ ಬರದಂತೆ ನಡೆದುಹೊಯ್ತು!



ಆಕೆ ಹೈಸ್ಕೂಲ್ ಕೊನೆಯ ವರ್ಷ. ನಾನು ಪ್ರಿ ಡಿಗ್ರಿಗೆ ಬೇರೆ ಕಾಲೇಜು ಸೇರಿದ್ದೆ. ಹಿಂದಿನ ವರ್ಷವೇ ನನಗಿಂತ ಹೆಚ್ಚಿನ ಮತಗಳಿಸಿ ಶಾಲಾಪಾರ್ಲಿಮೆಂಟಲ್ಲಿ ಲೀಡರಾಗಿ ಆಯ್ಕೆಯಾದವಳು ನನ್ನನ್ನೇ ಜಯಿಸಿದಳೇ ಅಂತನಿಸ್ತಾಯಿತ್ತು. ಮನಸು ಮಲ್ಲಿಗೆಯಾಗಿ ದಳದಳವೂ ಅರಳಿದಾಗ ಮೈತುಂಬ ಘಮವೆನಿಸುವ ಪ್ರಾಯ. ಭಾವಸಾಂದ್ರತೆಯಲ್ಲಿ ಬಿರಿದು ತನ್ನೊಳಗಿನ ಬೆಳಕಿನಲ್ಲೆ ಅರಳುವ ಆ ಕಣ್ಣುಗಳು! ನೋಡದಿರುವುದು ಸಾಧ್ಯವೇ ಇಲ್ಲ ಅಂತನಿಸುತ್ತಿತ್ತು. ಆಗ ನನಗೆ ಅಷ್ಟು ಮಾತ್ರ